(ಆ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕ 2013

ಪರ್ಯಾಲೋಚನಾ ಪ್ರಸ್ತಾವ

ಶೀ ಕೆ.ಜೆ. ಜಾರ್ಜ್ (ಗೃಹ ಸಚಿವರು) :– ಮಾನ್ಯ ಅಧ್ಯಕ್ಷರೆ, 2013ನೇ ಸಾಲಿನ ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು.

ಶೀ ಕೆ.ಜೆ. ಜಾರ್ಜ್ (ಗೃಹ ಸಚಿವರು) :– ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪೊಲೀಸ್ ಅಧಿನಿಯಮ, 1963ಕ್ಕೆ ಈಗಾಗಲೆ ಒಮ್ಮೆ ತಿದ್ದುಪಡಿ ಮಾಡಲಾಗಿದೆ. ಬೆಳಗಾವಿಯಲ್ಲಿ ನಡೆದಂಥ ವಿಧಾನ ಮಂಡಲದ ಅಧಿವೇಶನದಲ್ಲಿ ಅಂದಿನ ಸರ್ಕಾರ ಎರಡನೇ ತಿದ್ದುಪಡಿ ಬಿಲ್ ಅನ್ನು ಮಂಡಿಸಿತ್ತು. ಈ ತಿದ್ದುಪಡಿ ಅಲ್ಲಿ ಚರ್ಚೆಗೆ ಬಂದಿರುವುದಿಲ್ಲ. ಅದೇ ತಿದ್ದುಪಡಿ ಬಿಲ್ ಅನ್ನು ಯಾವುದೇ ವ್ಯತ್ಯಾಸ ಇಲ್ಲದೆ ಈ ವಿಧಾನಸಭೆಯಲ್ಲಿ ಮಂಡಿಸಲಾಗಿದೆ. ಉದ್ದೇಶಿತ ತಿದ್ದುಪಡಿಯಲ್ಲಿ ಪೊಲೀಸ್ ಸಿಬ್ಬಂದಿ ಮತ್ತು ಸದಸ್ಯರನ್ನು ಈ ಹಿಂದೆ ಪೊಲೀಸ್ ಮಹಾನಿರ್ದೇಶಕರು ಹಾಗು ಆರಕ್ಷಕ ನಿರೀಕ್ಷಕರು ಇವರ ಅಧ್ಯಕ್ಷತೆಯಲ್ಲಿ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ಹಿರಿಯ ಮೂರು ಅಧಿಕಾರಿಗಳನ್ನು ಒಳಗೊಂಡಂತೆ ಪೊಲೀಸ್ ಸಿಬ್ಬಂದಿ ಮಂಡಳಿಯನ್ನು ರಚಿಸಲಾಗಿತ್ತು. ಈ ರೀತಿಯಾಗಿ senior most ಇರತಕ್ಕಂಥವರನ್ನು ನೇಮಿಸಬೇಕೆಂದು ಸುಪ್ರೀಂ ಕೋರ್ಟ್ ಹೇಳಿಲ್ಲ. ಸೀನಿಯರ್ ಆಗಿರುವವರನ್ನು ನೀವು ಅದರಲ್ಲಿ ಆರಿಸಬಹುದೆಂದು ಸುಪ್ರೀಂ ಕೋರ್ಟ್‌ನ ಆದೇಶ ಇದೆ. senior most ಎಂದು ಇರುವುದರಿಂದ ನಮಗೆ ಆಡಳಿತಾತ್ಮಕವಾಗಿ ಕೆಲವೊಂದು ತೊಂದರೆಗಳು ಆಗುತ್ತಿವೆ. ಸುಮಾರು ಎರಡು ತಿಂಗಳಿಂದ Police Establishment Board (PEB) ಸೇರುತ್ತಿಲ್ಲ. ಪದೇ ಪದೇ court ನ reason ತೆಗೆದುಕೊಳ್ಳುತ್ತಿದ್ದಾರೆ. ಸುಮಾರು 10–15 ಜನ ಹಿರಿಯ DGP, IGP, ADGP ರವರು ಇದ್ದಾರೆ. ಅದಕ್ಕೋಸ್ಕರ ಇದರಲ್ಲಿ ಹಿರಿಯ ನಾಲ್ಕು

ಜನರನ್ನು ನಾಮನಿರ್ದೇಶನ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರವನ್ನು ಕೊಡುವಂಥ ಮೂಲ ತಿದ್ದುಪಡಿ ಇದಾಗಿದೆ. ಅದೇ ರೀತಿಯಲ್ಲಿ Dy. SPಮತ್ತು ಅದರ ಕೆಳಗಡೆ ಇರುವ officerಗಳನ್ನು ಮಾಡುವುದಕ್ಕೆ PEB ಬೋರ್ಡ್‌ಗೆ ಸಂಪೂರ್ಣವಾದಂಥ ಅಧಿಕಾರವನ್ನು ಕೊಡುತ್ತಿದ್ದೇವೆ. ಮತ್ತು ಅದಕ್ಕಿಂತ ಮೇಲಿರುವವರಿಗೆ ಸರ್ಕಾರದಿಂದಲೇ ಮಾಡುವಂಥ ಅಧಿಕಾರವನ್ನು ಮಾಡುತ್ತಿದ್ದೇವೆ. ಇವತ್ತು ನಮ್ಮ Police establishment ಏನಾದರೂ ಬದಲಾವಣೆ ಮಾಡಬೇಕಾದರೆ ಅದಕ್ಕೆ reasons ಕೊಟ್ಟು ಬದಲಾವಣೆ ಮಾಡಬೇಕೆಂದು ಇದರಲ್ಲಿ ತಿದ್ದುಪಡಿ ತರಲಾಗಿದೆ Operational Duties and Executive Duties ನಲ್ಲಿ ಬಹಳ ವ್ಯತ್ಯಾಸಗಳು ಕಾಣುತ್ತಿವೆ. Executive Duties ನಲ್ಲಿರುವವರೆಗೆ ಮಾತ್ರ ಒಂದು ವರ್ಷ tenure ಇರಬೇಕೆಂದು ಇದರಲ್ಲಿ ಹಾಕಿದ್ದಾರೆ. ಆದ್ದರಿಂದ operational dutiesನಲ್ಲಿ ಇರುವವರಿಗೆ ಸರ್ಕಾರದವರು ಯಾವ್ಯಾವ ರೀತಿಯಲ್ಲಿ ನಿರ್ದೇಶನವನ್ನು ಕೊಡುತ್ತಾರೆ ಅವರಿಗೂ ಆ ಒಂದು ಸೌಲಭ್ಯ ಕೊಡುವ ಉದ್ದೇಶದಿಂದ ಇನ್ನೊಂದು ತಿದ್ದುಪಡಿಯನ್ನು ತೆಗೆದುಕೊಂಡು ಬರುತ್ತಿದ್ದೇವೆ. ಅದೇ ರೀತಿ 20Fನಲ್ಲಿ Provision (1) ರಲ್ಲಿ "in consultation with the Police Establishment Board" ಎಂದು ಇದೆ, the words "in consultation with the" shall be omitted ಎಂದು ಮಾಡುತ್ತಿದ್ದೇವೆ. ಅದೇ ರೀತಿಯಲ್ಲಿ Section 20F Provision (2) "after consultation with the police Establishment Board" ಎಂದು ಇರುವುದನ್ನು "after consultation with the Police Establishment Board" shall be omitted ಎಂದು ಹಾಕಿದ್ದೇವೆ.Section 20 F ನಲ್ಲಿ operational duties ಹಾಕಿದ್ದೇವೆ. ಇದರ ಮೂಲ ಉದ್ದೇಶ ಏನೆಂದರೆ, ಇವತ್ತಿನದಿವಸ ಬೇರೆ ಬೇರೆ ಯಾವುದೇ department ನಲ್ಲಿರುವ IAS ಇರಬಹುದು ಅಥವಾ ಬೇರೆಯವರು ಇರಬಹುದು. ಒಟ್ಟಿನಲ್ಲಿ ಇಲಾಖೆಗೇ ಸಂಪೂರ್ಣವಾದಂಥ ಅಧಿಕಾರ ಇದೆ. ಸರ್ಕಾರ ಜವಬ್ದಾರಿಯಾಗಿರುವುದರಿಂದ ಈ ಸದನಕ್ಕೆ ಮತ್ತು ಸಾರ್ವಜನಿಕರಿಗೆ ನಾವು ಉತ್ತರ ಕೊಡುಬೇಕಾಗುತ್ತದೆ. ಯಾವುದೇ ರೀತಿಯ law and order,

Crime ಅಥವಾ ಇತರೇ ಎಲ್ಲ ವಿಚಾರಗಳಲ್ಲಿಯೂ ಸರಿಯಾದ ಅಧಿಕಾರಿಗಳನ್ನು ಅಲ್ಲಿ ಹಾಕದೆ ಇದ್ದರೆ ಅದನ್ನು ನಡೆಸಿಕೊಂಡು ಹೋಗುವುದಕ್ಕೆ ನಮಗೆ ಕಷ್ಟವಾಗುತ್ತದೆ. ಆದ್ದರಿಂದ, ಇವತ್ತಿನದಿವಸ ಏನಾಗಿದೆ ಎಂದರೆ, ಈ Police Establishment Board ನಲ್ಲಿ ಕೆಲವೊಂದು ಸಾರಿ ADGP ಗಳು ಸಹ ಅದರ ಸದಸ್ಯರಾಗಿರುತ್ತಾರೆ. DGPರವರ ಹಾಗೂ ಅವರ colleagues ಪ್ರಮೋಷನ್ ವಿಚಾರದಲ್ಲಿ ಇವತ್ತಿನದಿವಸ ADGPರವರು ಆದೇಶವನ್ನು ಹೊರಡಿಸುವ ಸಂದರ್ಭ ಇರುತ್ತದೆ. ಆದ್ದರಿಂದ Additional Superintendent ಮತ್ತು ಅದಕ್ಕಿಂತ ಮೇಲೆ ಇರುವ ಯಾವುದೇ ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮತ್ತು Promotion ಕೊಡುವಂಥ ವಿಚಾರದಲ್ಲಿ ಆ ಅಧಿಕಾರವನ್ನು ನಾವು ಸರ್ಕಾರದಲ್ಲಿ ಇಟ್ಟುಕೊಳ್ಳುತ್ತಿದ್ದೇವೆ.

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ) : ಮಾನ್ಯ ಅಧ್ಯಕ್ಷರೆ, 20ಎಫ್ (ಬಿ)ನಲ್ಲಿ ಇದು ನಿಯಮಿಸಲಾದಂತೆ ನೇರ ನೇಮಕಾತಿ ಮತ್ತು ಬಡ್ತಿಗಾಗಿನ ಮೀಸಲಾತಿಯನ್ನು ಮತ್ತು ಕೋಟಾವನ್ನು ಸೂಕ್ತವಾಗಿ ಪರೀಶೀಲಿಸಿದ ತರುವಾಯ, ಪೊಲೀಸು ಉಪ ಅಧೀಕ್ಷಕನ ದರ್ಜೆಯ ಬಡ್ತಿಗೆ ಶಿಫಾರಸ್ಸನ್ನು ಮಾಡತಕ್ಕದ್ದು. ಈ ಉದ್ದೇಶಕ್ಕಾಗಿ ಸರ್ಕಾರವು ಕಾಲಕಾಲಕ್ಕೆ ನಿಯಮಿಸಬಹುದಾದ ಆದೇಶಗಳು ಮತ್ತು ಮಾರ್ಗದರ್ಶಿಗಳ ಸೂತ್ರಗಳನ್ವಯ ಪೊಲೀಸ್ ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು ಒಂದು ಪ್ರತ್ಯೇಕ ರಿಜಿಸ್ಟರ್‌ನ್ನು ಇಡಬೇಕೆನ್ನುವ ಮಾತನ್ನು ಹೇಳಿದ್ದಾರೆ. ಇದರಲ್ಲಿ ನೇರ ನೇಮಕಾತಿ ಮತ್ತು Promotion ಅನ್ನತಕ್ಕಂಥ ಪದವನ್ನು ಬಳಸುತ್ತಾರೆ. ಮೂರು ಜನರನ್ನು "ಜ್ಯೇಷ್ಠತೆ ಆಧಾರದ ಮೇಲೆ" ನೇಮಿಸಬೇಕು ಎನ್ನತಕ್ಕಂಥದ್ದು ಈ ಹಿಂದೆ ಇತ್ತು. ಇವತ್ತು ತಂದಿರಕ್ಕಂಥದ್ದು ಹಿರಿಯ ಪೊಲೀಸ್ ಅಧಿಕಾರಿಗಳು ಎನ್ನತಕ್ಕಂಥದ್ದು ಈ ಬದಲಾವಣೆ ಮಾಡಿ ಈ ಬಿಲ್ ಮಂಡಿಸಿದ್ದಾರೆ. ನಾನು ಸರ್ಕಾರಕ್ಕೆ ಏನು ಕೇಳುವುದಕ್ಕೆ ಬಯಸುತ್ತೇನೆ ಎಂದರೆ, ನೇರ ನೇಮಕಾತಿ ಮತ್ತು Promotion ವಿಷಯ ಬಂದಾಗ ಇಲ್ಲಿ ಒಬ್ಬ scheduled caste/scheduled tribe ಅಧಿಕಾರಿ ಇರಬೇಕಾಗುತ್ತದೆ. ಅವರ ಹಿತವನ್ನು ಕಾಯತಕ್ಕಂಥದ್ದು ಮತ್ತು ಹಿತವನ್ನು ರಕ್ಷಣೆ ಮಾಡತಕ್ಕಂಥದು ಸರ್ಕಾರದ ಜವಾಬ್ದಾರಿ. ಅದಕ್ಕಾಗಿ ಈ ಮೂರರಲ್ಲಿ ಒಬ್ಬರು SC / ST

ಜನಾಂಗದವರನ್ನು ಸೇರಿಸಬೇಕು. ಅದಕ್ಕಾಗಿ ನಾನು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ. ಇದನ್ನು ಬದಲಾವಣೆ ಮಾಡಿ ಮಂಡಿಸಬೇಕು ಮತ್ತು ಒಪ್ಪಿಗೆಯನ್ನು ಪಡೆಯಬೇಕೆಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ (ಪದ್ಮನಾಭನಗರ) : ಮಾನ್ಯ ಅಧ್ಯಕ್ಷರೆ, ಹೊಸದಾಗಿ ಒಂದು ತಿದ್ದುಪಡಿಯನ್ನು ತರುವಂಥ ಪ್ರಯತ್ನ ನಡೆಯುತ್ತಿದೆ. ಇದರಲ್ಲಿ ಘನತೆವೆತ್ತ ಭಾರತದ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಪಾಲನೆ ಮಾಡುವುದಕ್ಕಾಗಿ ಅಂತ ಇದೆ. ದಯವಿಟ್ಟು ಘನತೆವೆತ್ತ ಭಾರತದ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನ ಏನಿದೆ ಅದು ಮತ್ತು ತಾವು ಏನು ಪರಿವರ್ತನೆ ಯಲ್ಲಿ ಇದನ್ನು ಇಲ್ಲಿ ತಂದಿದ್ದೀರಿ ಎಂದು ಕೊಡುವುದು. ಇಲ್ಲಿ ಎರಡನೆಯದಾಗಿ ಸೀನಿಯಾರಿಟಿಯ ಪ್ರಶ್ನೆ. ಹಿಂದೆ ಎಲ್ಲಾ ಇರುವುದು ಸೀನಿಯಾರಿಟಿ ಯಾರು higher rank ಇರುತ್ತಾರೋ ಅಲ್ಲಿಂದ 4 ಜನರನ್ನು ಆಯ್ಕೆ ಮಾಡುವಂಥದ್ದು. ಹಿರಿಯ ಅಧಿಕಾರಿಗಳು ಮಹಾನಿರ್ದೇಶಕರ ದರ್ಜೆಯ ಕಡಿಮೆ ಇಲ್ಲದವರು ಸುಮಾರು 20–25 ಅಧಿಕಾರಿಗಳು ಬರುತ್ತಾರೆ. ಆಗ ನಿಮಗೆ ಯಾರು ಬೇಕು ಅವರನ್ನು choice ಮಾಡಿ ಮಾಡುತ್ತೀರಿ. ಆಗ Supreme Court ನ ಆದೇಶವನ್ನು ಹೇಗೆ ಪಾಲನೆ ಮಾಡಿದಂತಾಗುತ್ತದೆ? Supreme Court ಆದೇಶ clear ಆಗಿ ಇರುವುದು. 1,2,3,4 ಎಂದು seniority ಯನ್ನು maintain ಮಾಡಬೇಕು. ಅದು ನಿಮ್ಮಲ್ಲಿ ಇಲ್ಲವೇ ಇಲ್ಲ. ಅದನ್ನು ದಯವಿಟ್ಟು ತಿಳಿಸಬೇಕು ಮತ್ತು Supreme Court ಆದೇಶದ ಪ್ರಕಾರ ಇದನ್ನು ತರುತ್ತಿದ್ದೀರಾ ಎಂದು ಹೇಳಬೇಕು.

ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ) :– ಮಾನ್ಯ ಅಧ್ಯಕ್ಷರೆ, ಈ ಬಿಲ್‌ನಲ್ಲಿ ಒಂದು ಅಂಶವನ್ನು ಹೇಳಿದ್ದಾರೆ. ಪೇಜ್ ನಂ:3 ರಲ್ಲಿ 2ನೇ ಪ್ಯಾರಾದಲ್ಲಿ "ಮತ್ತು ಪರಂತು, ಸರ್ಕಾರವು, ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ, ದುರ್ನಡತೆ ಅಥವಾ ಅತೀವ ನಿರ್ಲಕ್ಷ್ಯತೆ ಅಥವಾ ನೈತಿಕ. ಅಧಃಪತನದ ಕೃತ್ಯಕ್ಕಾಗಿ ಒಬ್ಬ ಅಧಿಕಾರಿಯನ್ನು ಆತನ ಕನಿಷ್ಠ ಪದಾವಧಿಯ ಮುಕ್ತಾಯಕ್ಕೆ ಮೊದಲು ಆತನನ್ನು ವರ್ಗಾವಣೆ ಮಾಡಬಹುದು." ಇಷ್ಟೆಲ್ಲಾ ಮಾಡಿದವನು ವರ್ಗಾವಣೆ ಮಾಡಿದರೆ ಇನ್ನೊಂದು ಕಡೆಗೆ ಅವನು ಸರಿ ಇರುತ್ತಾನೆ

ಎನ್ನುವುದು ಏನು ಗ್ಯಾರಂಟಿ? ಇಷ್ಟೆಲ್ಲಾ ಸರ್ಕಾರಕ್ಕೆ prove ಆದ ಮೇಲೆ ಅವನನ್ನು suspend ಮಾಡಬೇಕು. ಅವನನ್ನು dismiss ಮಾಡುವಂಥ ಕೃತ್ಯಗಳನ್ನು ಅವನು ಮಾಡಿರುತ್ತಾನೆ. ಅವನನ್ನು ವರ್ಗಾವಣೆ ಮಾಡಬಹುದೆಂದು ಹೇಳಿದರೆ ಅವನು ವರ್ಗಾವಣೆ ಬಯಸುವವನು ಆಗಿದ್ದರೆ ಇದೇ ಕೆಲಸವನ್ನು ಅವನು ಶುರು ಮಾಡುತ್ತಾನೆ ಮತ್ತು ಸುಳ್ಳು report ಬರೆಸುವುದಕ್ಕೆ ಶುರು ಮಾಡುತ್ತಾನೆ. ನಿಜವಾಗಿಯೂ ಅಂತಹ ಕೆಲಸವನ್ನು ಮಾಡಿದ್ದರೆ ಅವನನ್ನು suspend ಮಾಡಬೇಕು ಎನ್ನುವುದನ್ನು ಸೇರಿಸಬೇಕೇ ಹೊರತು ಅವನನ್ನು ವರ್ಗಾಯಿಸುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಅವರೇ ಹೇಳಿದಂತೆ ನಾವು ವರ್ಗಾವಣೆ ಮಾಡಬೇಕು ಎನ್ನುವುದಕ್ಕೆ ಒಂದು ಷರಾ ಬರೆದುಕೊಳ್ಳುವುದಕ್ಕೆಂದು ಆಗಿ ಬಿಡುತ್ತದೆ. Supreme Courtನ ಆಶಯ ಏನಿದೆ ಎಂದರೆ ಈ ವ್ಯವಸ್ಥೆಯನ್ನು ಆದಷ್ಟು ರಾಜಕೀಯದಿಂದ ಮುಕ್ತಗೊಳಿಸಿ ಪಾರದರ್ಶಕ ವ್ಯವಸ್ಥೆ ತರಬೇಕು ಎನ್ನುವುದು ಈಗ ನಾವು ಅದನ್ನು ಪರೋಕ್ಷವಾಗಿ ಮತ್ತೆ ನಮ್ಮ ಹಿಡಿತದಲ್ಲಿಯೇ ತೆಗೆದುಕೊಳ್ಳಬೇಕು ಎನ್ನುವುದು ಉದ್ದೇಶ ಸರ್ಕಾರಕ್ಕೇನಾದರು ಇದೆಯಾ? ಪೊಲೀಸ್‌ನ್ನು ದುರ್ಬಳಕೆ ಮಾಡಿಕೊಂಡು ತಮ್ಮ ಮೂಗಿನ ನೇರಕ್ಕೆ ನಡೆಸಿಕೊಳ್ಳಬೇಕು ಎನ್ನುವ ಉದ್ದೇಶದಿಂದ ಈ ರೀತಿ ತಿದ್ದುಪಡಿಯನ್ನು ಏನಾದರೂ ತರುತ್ತಿದೆಯಾ? ಅದು ನನಗೆ ಗೊತ್ತಿಲ್ಲ. ದುರ್ನಡತೆ ಎನ್ನುವುದಾದರೆ ಅದನ್ನು dismiss ಮಾಡಬೇಕು. ಆ ದುರ್ನಡತೆ ಇರುವವನನ್ನು ಚಿಕ್ಕಮಗಳೂರಿನಿಂದ ತೆಗೆದು ಸಾಗರಕ್ಕೆ ಹಾಕಿದರೆ ಅವನು ಸರಿ ಹೋಗಿ ಬಿಡುತ್ತಾನೆಯಾ? ಸಾಗರದಲ್ಲಿ ನಿಮ್ಮ ಮೆಲೆ ದುರ್ನಡತೆ ಮಾಡಿದವರನ್ನು ತೆಗೆದುಕೊಂಡು ಬಂದು Home Minister ನವರ constituemcy ಗೆ ತಂದು ಹಾಕಿದರೆ ಅವರು ಸರಿ ಹೋಗಿ ಬಿಡುತ್ತಾನಾ?

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಗೋವಿಂದ ಎಂ.ಕಾರಜೋಲರವರು ಹೇಳಿದಂತೆ, ಈ ತಿದ್ದುಪಡಿಯನ್ನು 20–ಬಿಗೆ ನಾನು ತಿದ್ದುಪಡಿಯನ್ನು ಮಾಡುತ್ತಿಲ್ಲ. ನೀವು ಹೇಳಿದಿರಲ್ಲಾ ಅದು ಹಾಗೆ ಇರುತ್ತದೆ. ನೀವು ಹೇಳಿದಂತೆ ಅದರ ಪ್ರಕಾರ ನಾವು promotion ಕೊಡುತ್ತೇವೆ. ಮಾನ್ಯ ಅಶೋಕ್‌ರವರು ಮಾಜಿ ಗೃಹ ಸಚಿವರಾಗಿದ್ದಂಥವರು. ಬಹುಶಃ ಅವರ

ಅನುಭವದಲ್ಲಿ ಈ ಇಲಾಖೆಯನ್ನು ನಡೆಸಬೇಕಾದರೆ ಕಷ್ಟ ಎಂದು ಹೇಳಿಬಿಟ್ಟು ಅವರು ಏನು ತಿದ್ದುಪಡಿಯನ್ನು ತಂದಿದ್ದಾರೆ Cabinet ನಲ್ಲಿ Cabinet sub-committee ಯಲ್ಲಿ ಇಟ್ಟು ಯಾವುದಕ್ಕೆ ಅವರು ತಿದ್ದುಪಡಿಯನ್ನು ತಂದಿದ್ದಾರೆ ಅದಕ್ಕೆ ಯಾವ ವ್ಯತ್ಯಾಸ ಇಲ್ಲದೆ ಅದನ್ನು ತಂದಿದ್ದೇವೆ. ಅವರು ಮರೆತು ಹೋಗಿರಬಹುದು. ಬೆಳಗಾಂ ಅಧಿವೇಶನದಲ್ಲಿ ಈ ಒಂದು ತಿದ್ದುಪಡಿ ಆಗಬೇಕಾಗಿತ್ತು. ತಾವು ಒಂದನ್ನು ಹೇಳುತ್ತಿದ್ದೀರಿ. Supreme Court ಆದೇಶದಲ್ಲಿ senior most ಎಂದು ಇಲ್ಲವೇ ಇಲ್ಲ. Supreme Court ಆದೇಶದಲ್ಲಿ

> "The Establishment Board Shall be a Departmental body comprising the Director General of Police and four other senior officers of the department". ಎಂದು ಹೇಳಿದ್ದಾರೆ.

ಆದರೆ senior most ಇಲ್ಲ. ನೀವು ತಿದ್ದುಪಡಿ ತಂದಾಗಲು ಇದೇ senior ಎಂದು ತಂದಿದ್ದೀರಿ. ಆದ್ದರಿಂದ ದಯವಿಟ್ಟು ತಮ್ಮ ಅನುಭವದಲ್ಲಿ ತಮಗೆ ಗೊತ್ತಾಗಿದೆ. ಸರ್ಕಾರಕ್ಕೆ ಯಾವುದೇ department ನಡೆಸಬೇಕಾದರೆ, ಸರ್ಕಾರ ಯಾರು? ಜನರಿಂದ ಆಯ್ಕೆ ಆಗಿ ಬಂದವರು. We are answerable to the Assembly, we are answerable to the Council and we are answerable to the the public. PE Board, ಅವರೇ ಸಂಪೂರ್ಣವಾಗಿ ಮಾಡುವುದಾರೆ ನಾವು ಇಲ್ಲಿ ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ? ಅದರ ಉದ್ದೇಶದಿಂದಲೇ ಈ ತಿದ್ದುಪಡಿಯನ್ನು ತಂದಿರುತ್ತೀರಿ. ದಯವಿಟ್ಟು ಮಾನ್ಯ ಸಿ.ಟಿ.ರವಿಯವರು ಮತ್ತು ಅರವಿಂದ ಲಿಂಬಾವಳಿಯವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಒಂದು ವರ್ಷದ ಒಳಗಡೆ ಯಾರಿಗಾದರೂ transfer ಮಾಡಬೇಕಾದರೆ ಈ ತರಹ reason ಇರಬೇಕೆಂದು ಮಾಡಿದ್ದೇವೆ. ಹಲವಾರು reasons ಕೊಟ್ಟಿದ್ದೇವೆ. ಒಂದು ವರ್ಷದ ಒಳಗಡೆ ಮಾಡಬೇಕಾದರೆ ಅವರು ಏನಾದರೂ ದೊಡ್ಡ ತಪ್ಪನ್ನು ಮಾಡಿದ್ದರೆ ಅವರ ಮೇಲೆ disciplinary actionತೆಗೆದುಕೊಳ್ಳುತ್ತೇವೆ ಮತ್ತು

suspension ಕೂಡ ಮಾಡುತ್ತೇವೆ.Depend upon ಅವರು ಯಾವ ರೀತಿಯಾದ ತಪ್ಪು ಮಾಡಿರುತ್ತಾರೆ ಅದರ ಮೇಲೆ depend ಆಗಿರುತ್ತದೆ. ಸಣ್ಣ ತಪ್ಪುಮಾಡಿದರೆ ವರ್ಗಾವಣೆ ಮಾಡುವ ಪದ್ಧತಿ ಮೊದಲಿನಿಂದ ಇದೆ.

ಶ್ರೀ ಆರ್. ಅಶೋಕ : ಮಾನ್ಯ ಗೃಹ ಸಚಿವರು Supreme Court ಆಶಯ ಏನು ಎಂದು ಓದಿದರು. So ನಾವು ಅದನ್ನೇ ಹೇಳುತ್ತಿರುವುದು. Supreme Court ನ ಆಶಯ ಏನಿದೆ ಅದನ್ನೇ ತೆಗೆದುಕೊಂಡು ಬನ್ನಿ ಎಂದು ನಾವು ಹೇಳುತ್ತಿರುವುದು.

ಅಧ್ಯಕ್ಷರು : ತಾವು ಇದ್ದಾಗ ಏನು ತಿದ್ದುಪಡಿಯನ್ನು ತಂದಿದ್ದೀರಿ, ಅದನ್ನೇ ತಂದಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಆರ್. ಅಶೋಕ : ಮಾನ್ಯ ಅಧ್ಯಕ್ಷರೆ, ಅದನ್ನು ನಾನು ಅವರಿಗೆ ಹೇಳುತ್ತೇನೆ. ನಾನು ತಿದ್ದುಪಡಿ ತಂದಿರುವುದು ಪ್ರಯತ್ನ ಮಾಡಿರುವುದು ನಿಜ. ಆದರೆ ಅದನ್ನು ನೋಡಿದ ಮೇಲೆ ಅಲ್ಲಿ ನಾನು ಮಂಡನೆ ಮಾಡಲಿಲ್ಲ. ನಾನು ಬೆಳಗಾಂ ದಲ್ಲಿ ಮಂಡನೆ ಮಾಡಿದೆನಾ? ಮಾಡಿಲ್ಲ. ಮಂಡನೆ ಮಾಡಿಲ್ಲವೆಂದು ಅದರ ಅರ್ಥ ಏನು? ಹಾಗಾದರೆ ಏಕೆ ಮಾಡಲಿಲ್ಲ?

ಶ್ರೀ ಕೆ.ಜೆ. ಜಾರ್ಜ್ : ಅಧಿವೇಶನ ಮುಗಿಯಿತು. ಮಂಡನೆ ಮಾಡಲಿಲ್ಲ.

ಶ್ರೀ ಆರ್. ಅಶೋಕ : ಏನೂ ಇಲ್ಲ, ಬೇಕಾದಷ್ಟು ದಿವಸ ಅಧಿವೇಶನ ನಡೆಯಿತು. ನಾನು ಮಂಡನೆ ಮಾಡುವ ದಿನದ ನಂತರ ಅಧಿವೇಶನ ಬಹಳ ದಿವಸ ನಡೆಯಿತು. ಆದರೆ ನಾನು ಮಂಡನೆ ಮಾಡಲಿಲ್ಲ. ಏಕೆ ಮಂಡನೆ ಮಾಡಲಿಲ್ಲವೆಂದರೆ, Supreme Court ಆದೇಶ ಏನಿದೆ ಅದಕ್ಕೆ ಇದು violation ಆಗುತ್ತದೆ. ಇದು ಪೂರ್ತಿ ಸರ್ಕಾರದ ಹಿಡಿತಕ್ಕೆ ಬಂದು ಬಿಡುತ್ತದೆ. 100% ಸರ್ಕಾರದ choice ಬರುತ್ತದೆ. ಸರ್ಕಾರದ choice ಬರುವುದಿಲ್ಲವೆಂದರೆ Supreme Court ನ ಆದೇಶ ಏನಿದೆ ಅದನ್ನು mention ಮಾಡಿಬಿಡಿ. ಆಗ ಮುಗಿದು ಹೋಯಿತು. No question at all. Supreme Court ಏನು ಆದೇಶ ಕೊಟ್ಟಿದೆ ಇದರ ಬದಲಾಗಿ ನೀವು ಮಹಾ ನಿರೀಕ್ಷಕರು ಅಧ್ಯಕ್ಷರಾಗಿರುವ ಮತ್ತು ಸರ್ಕಾರವು ನಾಮ ನಿರ್ದೇಶಿಸುವ ಪೊಲೀಸ್‌ರು ಅಪರ ಮಹಾ ನಿರ್ದೇಶಕರ ದರ್ಜೆಗಿಂತ ಕಡಿಮೆ ಇಲ್ಲದ ಮೂವರು ಹಿರಿಯ ಪೊಲೀಸ್ ಅಧಿಕಾರಿಗಳು ಸದಸ್ಯರು ಎಂದು ಇದೆಯಲ್ಲ,

ಅದರ ಬದಲಾಗಿ Supreme Court ಆದೇಶ ಏನಿದೆ ಅದನ್ನು mention ಮಾಡಿದರೆ ಮುಗಿದು ಹೋಯಿತು.

ಅಧ್ಯಕ್ಷರು : ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಕಾನೂನಿನಲ್ಲಿ....

ಶ್ರೀ ಆರ್. ಅಶೋಕ : ಮಾನ್ಯ ಅಧ್ಯಕ್ಷರೆ, Supreme Court ಈ ರೀತಿ ಮಾಡಿ ಎಂದು ನಿರ್ದೇಶನವನ್ನು ಕೊಟ್ಟಿದೆ. ನೀವು change ಮಾಡುವುದಕ್ಕೆ ಬರುವುದಿಲ್ಲವೆಂದರೆ, ನೀವು ಆ ಆದೇಶವನ್ನು ಬದಲಾವಣೆ ಮಾಡುತ್ತಿದ್ದೀರಿ.

ಅಧ್ಯಕ್ಷರು : Supreme Court ನ ಆದೇಶದ ಪ್ರಕಾರ ಏನು provision ಮಾಡಬೇಕೋ ಅಷ್ಟು ಮಾಡಬೇಕು.

ಶ್ರೀ ಆರ್. ಅಶೋಕ : ಅದನ್ನೇ ನಾನು ಹೇಳುತ್ತಿರುವುದು.

ಅಧ್ಯಕ್ಷರು : Supreme Court ನಲ್ಲಿ ಹೆಸರನ್ನು ಉಲ್ಲೇಖ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಆರ್. ಅಶೋಕ : Supreme Court ನ ಆದೇಶವನ್ನು ಪಾಲನೆ ಮಾಡಿ, ನೀವು ಬದಲಾವಣೆ ಮಾಡಬೇಡಿ ಎಂದ ಹೇಳುತ್ತಿದ್ದೇನೆ. ಅವರು Supreme Court ನ ಆದೇಶವನ್ನು ಬದಲಾವಣೆ ಮಾಡುತ್ತಿದ್ದಾರೆ. ಅದನ್ನು ಬದಲಾವಣೆ ಮಾಡದೆ ಅದು ಹೇಗೆ ಇದೆಯೋ ಹಾಗೆ ಎಂದು ಮಾನು ಕೇಳುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನೆ ಸಚಿವರು) : Police Establishment Board ಅನ್ನು constitute ಮಾಡತಕ್ಕಂಥ ಮಸೂದೆಯನ್ನು ನೀವು ತಂದು ಪಾಸ್ ಮಾಡಿಕೊಂಡಿರಿ. ಕಳೆದ ಒಂದು ವರ್ಷ, ಎರಡು ವರ್ಷದಲ್ಲಿ ಆಡಳಿತ ಮಾಡುವಂತಹ ಸಂದರ್ಭದಲ್ಲಿ ಈ ಅಮೆಂಡ್‌ಮೆಂಟ್ಸ್ ಹಿಂದಿನ ನಿಮ್ಮ ಸರ್ಕಾರ ಇದ್ದಾಗಲೇ propose–ಆಗಿತ್ತು. It is an interpretation ಸುಪ್ರೀಂ ಕೋರ್ಟಿನ judgment ಏನಿದೆ, ಅದನ್ನು ಯಾವ ರೀತಿ interpret ಮಾಡುತ್ತೇವೆ. ಎನ್ನುವುದು ಆಗಿದೆ. ಆಡಳಿತ ನಡೆಸಬೇಕಾದಂತಹ ಸಂದರ್ಭದಲ್ಲಿ ಬಂದತಹ ತೊಂದರೆಗಳನ್ನು ಅದಕ್ಕೆ ಪರಿಶೀಲನೆ ಮಾಡುವಂಥ್ದು. ಅಂದರೆ ಸುಪ್ರೀಂ ಕೋರ್ಟಿನ ನಿರ್ದೇಶನದ

ವ್ಯಾಪ್ತಿಯಲ್ಲಿ ಇದೆಯೇ ವಿನಃ ಬೇರೆ ಏನೂ ಮಾಡುವುದಕ್ಕೆ ಹೋಗಿಲ್ಲ. ಹಾಗಾಗಿ ಮಾನ್ಯ ಕಾರಜೋಳರವರು ಎತ್ತಿರತಕ್ಕಂಥ ವಿಚಾರ, ಮೂರು ಜನ ಅಧಿಕಾರಿಗಳನ್ನು ಹಾಕಬೇಕು. ಡಿ.ಜಿ. ಗಳನ್ನು ನೇಮಕ ಮಾಡಬೇಕೆಂದಾಗ, ನೀವು ಕೊಟ್ಟಿರತಕ್ಕಂಥ ಸಲಹೆ ಏನಿದೆ, ಒಬ್ಬರು ಎಸ್.ಸಿ. ಯವರು ಇರಬೇಕು ಎನ್ನುವಂಥದ್ದು. ಅದು ಒಳ್ಳೆಯ ಸಲಹೆ ಅದನ್ನು ಸರ್ಕಾರ ಪರಿಗಣನೆ ಮಾಡುತ್ತದೆ. ಅದರ ಜೊತೆಗೆ ಈಗ ಒಂದು ವರ್ಷದೊಳಗೆ ವರ್ಗಾವಣೆ ಮಾಡಬೇಕಾದಾಗ, Police Establishment Boardನ ವ್ಯಾಪ್ತಿಗೆ ಬರುತ್ತದೆ. ಅಂತಹ ಸಂದರ್ಭದಲ್ಲಿ ಕಾರಣ ಕೊಟ್ಟು ಮಾಡಬೇಕು ಎನ್ನುವುದು ಅಷ್ಟೆ ಬದಲಾವಣೆ. ಮೂಲಭೂತವಾಗಿ ಸುಪ್ರೀಂ ಕೋರ್ಟ್‌ನ judgment ಗೆ ಯಾವುದೇ ರೀತಿಯಾದಂತಹ ಬದಲಾವಣೆ ಇಲ್ಲ.

ಶ್ರೀ ಆರ್. ಅಶೋಕ (ಪದ್ಮನಾಭನಗರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸುಪ್ರೀಂ ಕೋರ್ಟ್‌ನ ವ್ಯಾಪ್ತಿಯಲ್ಲಿ ಇದೆ ಎಂದು ಹೇಳಿದರು. ನನ್ನ ಪ್ರಕಾರ ಅದು ಇಲ್ಲ. ಸುಪ್ರೀಂಕೋರ್ಟ್‌ನ ವಿರುದ್ಧವಾಗಿ ಇದ್ದೀರಿ. ನಾಳೆ ದಿವಸ ಯಾರಾದರೂ challenge ಮಾಡಿದರೆ ಈ Act ಸುಪ್ರೀಂ ಕೋರ್ಟ್‌ನಲ್ಲಿ ನಿಲ್ಲುತ್ತದೆಯೇ? ದಯವಿಟ್ಟು ಅದನ್ನು ಯೋಚನೆ ಮಾಡಿ. ಸುಪ್ರೀಂ ಕೋರ್ಟ್ ಆದೇಶ ಏನಿದೆ ಅದನ್ನು ನೀವು ವಿರುದ್ಧ ಮಾಡಿದರೆ ನಾಳೆ ಯಾರಾದರೂ challenge ಮಾಡೇ ಮಾಡುತ್ತಾರೆ. ನಮ್ಮ ಅಧಿಕಾರಿಗಳು ಇದರಲ್ಲೇ ಬಹಳ ಪರಿಣಿತಿವುಳ್ಳವರು. ಇದರ ಬಗ್ಗೆ ಈಗಾಗಲೇ ಬಹಳಷ್ಟು ಕೋರ್ಟ್ ಮೆಟ್ಟಿಲು ಹತ್ತಿದ್ದಾರೆ. ಅದಕ್ಕೆ ಮತ್ತೆ ಸುಪ್ರೀಂ ಕೋರ್ಟ್‌ನಲ್ಲಿ challenge ಮಾಡಿದರೆ ನಮ್ಮ ಸ್ಥಿತಿ ಏನಾಗಬಹುದು? ಈ Act ನ ಸ್ಥಿತಿ ಎನ್ನುವುದನ್ನು ಯೋಚನೆ ಮಾಡಿ.

ಶ್ರೀ ಗೋವಿಂದ ಎಂ ಕಾರಜೋಳ (ಮುಧೋಳ) : ತಮ್ಮ ಉತ್ತರ clear ಆಗಲಿಲ್ಲ. ನಾನು ಕೇಳಿರತಕ್ಕಂಥದ್ದು ಮೂವರು ಸದಸ್ಯರಲ್ಲಿ ಇಬ್ಬರು ಪರಿಶಿಷ್ಟ ಜಾತಿಗೆ ಸೇರಿದವರು ಇರಬೇಕು ಎನ್ನತಕ್ಕಂಥದ್ದು. ನಾನು ಏಕೆ ಕೇಳಿದೆ ಎಂದರೆ, ಮೀಸಲಾತಿ ಪ್ರಕಾರ ಬಡ್ತಿಯನ್ನು ಕೊಡತಕ್ಕಂಥ, ಶಿಫಾರಸ್ಸು ಮಾಡತಕ್ಕಂಥ ಅಧಿಕಾರ ಆ ಕಮಿಟಿಗೆ ಇರುವುದರಿಂದ ಮತ್ತು ನೇರ ನೇಮಕಾತಿ ಬಗ್ಗೆ ಇರುವುದರಿಂದ ಎಸ್.ಸಿ/ಎಸ್.ಟಿ. ಜನಾಂಗದ interest ಅನ್ನು

safeguard ಮಾಡಬೇಕು. ಅದಕ್ಕಾಗಿ ಒಬ್ಬರು ಸದಸ್ಯರು ಇರಬೇಕೆಂದು ಹೇಳಿದೆ. ಸರ್ಕಾರಕ್ಕೆ ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಇದನ್ನು ಸೇರಿಸಿ, ತಿದ್ದುಪಡಿ ಮಾಡಿ ಮಂಡನೆ ಮಾಡಿ.

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಅಧ್ಯಕ್ಷರೆ, ತಂದಿರುವ ತಿದ್ದುಪಡಿ ವಿಧೇಯಕದ ಬಗ್ಗೆ ಈಗಾಗಲೇ ಸ್ವಲ್ಪ ಬೆಳಕನ್ನು ಚೆಲ್ಲಿದ್ದಾರೆ. ಸುಪ್ರೀಂ ಕೋರ್ಟ್ ಏನು direction ಕೊಟ್ಟಿತ್ತು ಎಂದು ಸ್ಪಷ್ಟವಾಗಿ ಹೇಳಿದ್ದರೆ ಬಹಳ clear ಆಗುತ್ತಿತ್ತು.

(ಗೊಂದಲ)

ಅಧ್ಯಕ್ಷರು : ಬಹಳ clear ಆಗಿ ಇದೆ.

(ಗೊಂದಲ)

ಶ್ರೀ ವೈ.ಎಸ್.ವಿ.ದತ್ತ :ಸುಪ್ರೀಂ ಕೋರ್ಟ್‌ನ direction ಅನ್ನು followಮಾಡುತ್ತೀರಾ? ಎನ್ನುವುದು ನಮಗೆ ಅಷ್ಟೇ ಬೇಕಾಗಿದ್ದು. ಬಹಳ ಸರಳ. ಸುಪ್ರೀಂ ಕೋರ್ಟ್ ಹೀಗೆ ಮಾಡಿ ಎಂದು ಹೇಳಿತ್ತು ಹಾಗೆ ತಂದಿದ್ದೇವೆ ಎಂದು ಹೇಳಿದ್ದರೆ ನಮ್ಮದೇನೂ ತಕರಾರು ಇಲ್ಲ. ಸುಪ್ರೀಂ ಕೋರ್ಟ್ ಹೇಳಿರುವುದು ಒಂದು, ನಾವು ತಂದಿರುವುದು ಒಂದು ಎಂದರೆ ವ್ಯತ್ಯಾಸವಾಗುತ್ತದೆ.

(ಗೊಂದಲ)

ಅಧ್ಯಕ್ಷರು : Relevant para ಹೇಳಿ.

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು): ಸುಪ್ರೀಂ ಕೋರ್ಟ್ ಏನು ಹೇಳುತ್ತದೆ ಎಂದರೆ:

> "The Establishment Board Shall be a Department body comprising of the Director General of Police and four other senior officers of the department".

ಸುಪ್ರೀಂ ಕೋರ್ಟ್‌ನವರು ಈ ರೀತಿ ಹೇಳಿದ್ದಾರೆ. ಕಳೆದ ಸರ್ಕಾರದವರು amendment ಮಾಡಿದಾಗ 'senior most'ಎಂದು ಹಾಕಿದ್ದಾರೆ. ಸುಪ್ರೀಂ ಕೋರ್ಟ್‌ನವರು 'senior most' ಎಂದು ಹಾಕಲಿಲ್ಲ.

ನನ್ನ ಹತ್ತಿರ judgment copyಇದೆ. ಡಿ.ಜಿ.ಪಿ ಗಳು ಮತ್ತು ಎ.ಡಿ.ಜಿ.ಪಿ ಗಳು ಸುಮಾರು 10–15 ಜನರು ಬರುತ್ತಾರೆ. ನಾವು ನಾಲ್ಕು ಜನರನ್ನು nominate ಮಾಡಬೇಕಾಗಿದೆ. ಆ ಸಮಯದಲ್ಲಿ ಸರ್ಕಾರ ಸರಿಯಾಗಿ ಯೋಗ್ಯತೆ ಇರುವವರನ್ನು ಒಳ್ಳೆಯವರನ್ನು ನೋಡಿಬಿಟ್ಟು ಮಾಡುತ್ತದೆ. ಮಾನ್ಯ ಕಾರಜೋಳರವರು ನೀಡಿದ ಸಲಹೆಯನ್ನು ನಾವು ಸ್ವೀಕಾರ ಮಾಡಿ ಅದರ ಸಮೇತ ಪರಿಶೀಲನೆ ಮಾಡಿ ಗಮನದಲ್ಲಿಟ್ಟುಕೊಂಡು ಆ ಕೆಲಸವನ್ನು ಮಾಡುತ್ತೇವೆ.

ಶ್ರೀ ವೈ.ಎಸ್.ವಿ.ದತ್ತ: ಮಾನ್ಯ ಗೃಹ ಸಚಿವರು ಹೇಳಿದ ಅರ್ಥದಲ್ಲಿ 'senior'ಎಂದು ಸುಪ್ರೀಂ ಕೋರ್ಟ್ direction ಕೊಟ್ಟಿದೆ. 'senior most' ಬದಲಿಗೆ ನಾವು senior ಎನ್ನುವುದಕ್ಕೋಸ್ಕರ ಇದನ್ನು ತರುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ 'senior most' ಬದಲಿಗೆ 'senior'ಎಂದರೆ, ಆಯ್ಕೆಗಳ ಸಾಧ್ಯತೆ ಜಾಸ್ತಿಯಾಗುತ್ತದೆ. ನಾಲ್ಕು ಜನ ಇರುವವರು 20 ಜನರು ಸಿಗುತ್ತಾರೆ. ಸ್ವಲ್ಪ ನಾವು ಒಳ್ಳೆಯವರನ್ನು ಆಯ್ಕೆ ಮಾಡಿಕೊಳ್ಳುಬಹುದು ಒಪ್ಪಿಕೊಳ್ಳೋಣ. ಆದರೆ ಮಾನ್ಯ ಅಧ್ಯಕ್ಷರೆ, ಅವರಲ್ಲಿ ಒಂದೇ ಒಂದು ನಮ್ರ ವಿನಂತಿ ಏನೆಂದರೆ, ಈಗ ತಂದಿರುವ ತಿದ್ದುಪಡಿ ಮಾಡಿ ನಮ್ಮದೇನೂ ತಕರಾರು ಇಲ್ಲ. ಆದರೆ ಇದು ರಾಜಕೀಯ ದಾಳ ಹಾಗೂ ಅಸ್ತ್ರವಾಗಬಾರದು. ಏಕೆಂದರೆ ಎಲ್ಲೋ ಒಂದು ಕಡೆ ಈ ಪೋಲೀಸ್ ಇಲಾಖೆಯಲ್ಲಿ ತಂದಿರುವುದು ರಾಜಕೀಯ ಗಾಳವಾಗಿ, ದಾಳವಾಗಿ, ಆಗದೇ ಇದ್ದವರ ಮೇಲೆ ಅಥವಾ ಯಾವುದೇ ಕ್ಷೇತ್ರದ ಮೇಲೆ ಅಸ್ತ್ರವಾಗಿ ಪ್ರಯೋಗವಾಗುವಂತೆ ಆಗಬಾರದು.

ಶ್ರೀ ಆರ್. ಅಶೋಕ : ಮಾನ್ಯ ಮಂತ್ರಿಯವರು ಒಂದು ಪದ ಹೇಳಬೇಕಷ್ಟೆ 'ಸುಪ್ರೀಂ ಕೋರ್ಟ್‌ನ ಆದೇಶ ಏನಿದೆ, ಅದರ ಪ್ರಕಾರ ನಾನು ತಂದಿದ್ದೇನೆ. ಅದನ್ನು ಪಾಲನೆ ಮಾಡುತ್ತಿದ್ದೇನೆ' ಎಂದು ಹೇಳಿದರೆ ಮುಗಿದು ಹೋಯಿತು. ರೆಕಾರ್ಡ್‌ಗೆ ಹೋದರೆ ಮುಗಿಯಿತು.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯಲ್ಲಿಯೇ ಇದೆ ನೋಡಿ. 'ಸುಪ್ರೀಂ ಕೋರ್ಟ್‌ನ ಅನ್ವಯ' ಎನ್ನತಕ್ಕಂಥದ್ದೇ ಇದೆ. ಅದರ ವ್ಯಾಪ್ತಿಯಲ್ಲಿ ಬಂದಿರತಕ್ಕಂಥದ್ದು ಬಿಟ್ಟರೆ ಬೇರೆ ಏನೂ ಇಲ್ಲ.

(ಗೊಂದಲ)

ಶ್ರೀ ಆರ್.ಅಶೋಕ : ಆ ಮಾತನ್ನು ಹೇಳಿ. ತಾವು floor ನಲ್ಲಿ 'ನಾವು ಸುಪ್ರೀಂ ಕೋರ್ಟ್‌ನ ಆದೇಶ ಏನಿದೆ ಅದರ ಪ್ರಕಾರ ತಂದಿದ್ದೇವೆ' ಎಂದು ಹೇಳಿ. ಮುಗಿದು ಹೋಯಿತು.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, statement of objects and reasons ನಲ್ಲಿ ಬಿಲ್‌ನಲ್ಲಿ ನಾವು ಖಚಿತವಾಗಿ ಹೇಳಿದ್ದೇವೆ. ನಾನು ಹೇಳುವುದನ್ನು ಸ್ವಲ್ಪ ಕೇಳಿ.

(ಗೊಂದಲ)

ಶ್ರೀ ಆರ್.ಅಶೋಕ : ಸರ್, ವಾದವೇ ಬೇಡ. ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ ತಂದಿದ್ದೇವೆ ಎಂದು ಹೇಳಿದರೆ ಮುಗಿಯಿತು.

(ಗೊಂದಲ)

ಅಧ್ಯಕ್ಷರು : ಅವರು ಹೇಳುತ್ತಿರುವುದು ಸರಯಾಗಿಯೇ ಇದೆಯಲ್ಲಾ. No, no. This is more than enough.

(ಗೊಂದಲ)

ಶ್ರೀ ಆರ್.ಅಶೋಕ : ಸರ್, ಅದರಲ್ಲಿ ಆ ರೀತಿ ಹೇಳಿಲ್ಲ.

(ಗೊಂದಲ)

ಅಧ್ಯಕ್ಷರು : ಹೇಳಿದ್ದಾರೆ. 'ಘನತೆವೆತ್ತ ಭಾರತದ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಪಾಲನೆ ಮಾಡುವುದಕ್ಕಾಗಿ ಮತ್ತು ಪೊಲೀಸ್ ಸಿಬ್ಬಂದಿ ಮಂಡಳಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ನಿಮ್ಮ ಬಿಲ್‌ನಲ್ಲಿಯೇ ಇದೆ.

(ಗೊಂದಲ)

ಶ್ರೀ ಆರ್.ಅಶೋಕ : ನಾನು ಅದನ್ನೇ ಕೇಳುತ್ತಿದ್ದೇನೆ, ಅಧ್ಯಕ್ಷರೆ. ಹೇಳಿದರೆ ಮುಂದುವರೆಸಿ ಎಂದು ಹೇಳುತ್ತಿದ್ದೇನಲ್ಲಾ?

ಅಧ್ಯಕ್ಷರು : ಮುಂದೆ ನೋಡಿ 'ಪೊಲೀಸ್ ಸಿಬ್ಬಂದಿಯ ಮಂಡಳಿಯ...'

(ಗೊಂದಲ)

ಶ್ರೀ ಆರ್.ಅಶೋಕ : ಬಹುಮತ ಇದೆ ತೆಗೆದುಕೊಂಡು ಬನ್ನಿ. ನಾಳೆ ಸುಪ್ರೀಂ ಕೋರ್ಟ್‌ನಲ್ಲಿ challenge ಮಾಡಿದರೆ ಇದು ಉಳಿಯುತ್ತದೆಯೇ?

(ಗೊಂದಲ)

ಅಧ್ಯಕ್ಷರು : ಬಿಲ್‌ಅನ್ನು ಮಂಡಿಸುವಾಗ ಅದರ ಉದ್ದೇಶವನ್ನು ಸ್ಪಷ್ಟವಾಗಿ ಹೇಳಿರಬೇಕಾದರೆ, it is a document ಅಲ್ಲವೇ?

(ಗೊಂದಲ)

ಶ್ರೀ ಆರ್.ಅಶೋಕ : ಮಾನ್ಯ ಅಧ್ಯಕ್ಷರೆ, ತಾವು ಪಾಸ್ ಮಾಡುತ್ತೀರಿ. ನಾಳೆ ಯಾರಾದರೂ ಇದನ್ನು question ಮಾಡಿದರೆ ಉಳಿಯುತ್ತದೆಯೇ?

(ಗೊಂದಲ)

ಅಧ್ಯಕ್ಷರು : ಈಗ ಇದರ ಬಗ್ಗೆ ಚರ್ಚೆ ಸಾಕು. ಪರ್ಯಾಲೋಚನಾ ಪ್ರಸ್ತಾವ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ) : ರಕ್ಷಣಾ ಇಲಾಖೆ ಸರ್ಕಾರದ ಹಿಡಿತಕ್ಕೆ ಸಿಗುತ್ತಿರಲಿಲ್ಲ. Board meetingಗಳೇ ಸೇರುತ್ತಿರಲಿಲ್ಲ. ಯಾವುದಾದರು ರಾಜಕಾರಣಿಗಳ ಮೇಲೆ ದೌರ್ಜನ್ಯ ಮಾಡುವುದು. ಆಗುತ್ತಿತ್ತು. ಈಗ ತಂದಿರುವುದು ಸರಿಯಿದೆ. ಕ್ಷೇತ್ರದ ಶಾಸಕರ ಗೌರವವನ್ನು ಕಾಪಾಡಿ.

ಅಧ್ಯಕ್ಷರು : 2013 ನೇ ಸಾಲಿನ ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ.
ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.
ಖಂಡ 2 ಮತ್ತು 3

ಅಧ್ಯಕ್ಷರು : 2 ಮತ್ತು 3 ನೇ ಖಂಡಗಳು ವಿಧೇಯಕದ ಅಂಗವಾಗಿರಬೇಕೆನ್ನುವುದು ಸಭೆಯ ಮುಂದಿರುವ

ವಿಷಯಕ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅನುಮೋದನೆ ದೊರಕಿದೆ.

2 ಮತ್ತು 3ನೇ ಖಂಡಗಳು ವಿಧೇಯಕದ ಅಂಗವಾದವು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ಮತ್ತು 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು : ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆನ್ನುವುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವತಣಿಕೆ ವಿಧೇಯಕದ ಅಂಗವಾಗಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಅಧ್ಯಕ್ಷರು : ಈಗ ಮಾನ್ಯ ಸಚಿವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸುವುದು.

ಅಂಗೀಕಾರ ಪ್ರಸ್ತಾವ

ಶ್ರೀ ಕೆ.ಜೆ.ಜಾರ್ಜ್ (ಗೃಹ ಇಲಾಖೆ) : ಮಾನ್ಯ ಅಧ್ಯಕ್ಷರೆ, **2013 ನೇ ಸಾಲಿನ ಕರ್ನಾಟಕ**

ಪೊಲೀಸು (ತಿದ್ದುಪಡಿ) ವಿಧೇಯಕವನ್ನು ಸಭೆಯು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ. ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2013ನೇ ಸಾಲಿನ ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿತು)

(ಅನುಬಂಧ–1)

ಅಧ್ಯಕ್ಷರು : ಈಗ ಮಾನ್ಯ ಕೃಷಿ ಸಚಿವರು ಒಂದು ಹೇಳಿಕೆಯನ್ನು ನೀಡುತ್ತಾರೆ.

11. ನಕಲಿ ರಸಗೊಬ್ಬರದ ಬಗ್ಗೆ ಕೃಷಿ ಸಚಿವರಿಂದ ಮುಂದುವರೆದ ಹೇಳಿಕೆ.

ಶ್ರೀ ಕೃಷ್ಣ ಭೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಸದನದಲ್ಲಿ ನಕಲಿ ರಸಗೊಬ್ಬರದ ಪ್ರಕರಣ ಪ್ರಸ್ತಾಪವಾಗಿತ್ತು. ಅದರ ಬಗ್ಗೆ ಅಂದು ಹೇಳಿಕೆಯನ್ನು ಮಾಡಿದ್ದೆ. ಅದರ ಮುಂದುವರೆದ ಒಂದು ಹೇಳಿಕೆಯನ್ನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಮಾಡಲಿಕ್ಕೆ ಬಯಸುತ್ತೇನೆ.